# ಅಲ್ಲಿದೆ ನಮ್ಮನೆ ಇಲ್ಲಿರುವುದು ಸುಮ್ಮನೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings mentioned without highlights are as per Ref. 1 and the difference in wordings as per Ref. 2 are marked in yellow highlights.

ರಾಗ ಪೂರ್ವಿ ತಾಳ ಅಟ್ಟ

ಅಲ್ಲಿದೆ ನಮ್ಮನೆ ಇಲ್ಲಿರುವುದು ಸುಮ್ಮನೆ ॥ ಪ ॥

ಕದ ಬಾಗಿಲಿರಿಸಿಹ ಕಳ್ಳ ಮನೆ ಇದು
ಮುದದಿಂದ ಲೋಲ್ಯಾಡೋ (ಲೋಲಾಡೋ) ಸುಳ್ಳು ಮನೆ
ಇದಿರಾಗಿ ವೈಕುಂಠ ವಾಸ ಮಾಡುವಂಥ
ಪದುಮನಾಭನ ದಿವ್ಯ ಬದುಕು ಮನೆ ॥ 1 ॥

ಮಾಳಿಗೆ ಮನೆಯೆಂದು ನೆಚ್ಚಿ ಕೆಡಲು ಬೇಡ
ಕೇಳಯ್ಯ ಹರಿಕಥೆ ಶ್ರವಣಂಗಳ
ನಾಳೆ ಯಮಧೂತರು ಬಂದೆಳೆದೊಯ್ವಾಗ
ಮಾಳಿಗೆ ಮನೆ ಸಂಗಡ ಬಾರದಯ್ಯ ॥ 2 ॥

ಮಡದಿ ಮಕ್ಕಳೆಂಬೊ ಹಂಬಲ ನಿನಗ್ಯಾಕೋ
ಕಡುಗೊಬ್ಬುತನದಲಿ ನಡೆಯದಿರು
ಒಡೆಯ ಶ್ರೀ ಪುರಂದರ ವಿಠಲನ ಚರಣವ
ದೃಢ ಭಕ್ತಿಯಲಿ ನೀ ಭಜಿಸೆಲೊ (ಭಜಿಸಿಕೊ) ಮನುಜ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಶ್ಲೇಷಾರ್ಥವಿರುವ ಒಂದು ಹಾಡು.

**ಅಲ್ಲಿದೆ ನಮ್ಮ ಮನೆ** – ಜೀವನಿಗೆ ನೆಲೆಯೆಂದರೆ ವೈಕುಂಠದಲ್ಲಿ, ಮುಕ್ತನಾಗಿ ಹರಿಸನ್ನಿಧಿಯಲ್ಲಿ ಇರುವುದೇ; ಅದು ಸ್ವಸ್ವರೂಪಸ್ಥಿತಿ. 'ಮನೆ'ಯೆಂದರೆ ನೆಮ್ಮದಿಯ ತಾಣ.

**ಇಲ್ಲಿ ಬಂದೆ** – ಸಂಸಾರಕ್ಕೆ ಬಂದು ತೊಳಲುತ್ತಿರುವುದು, ಜೀವನಿಗೆ ಬಂಧನಸ್ಥಿತಿಯಿರುವುದು.

**ಸುಮ್ಮನೆ** – ಉದ್ದೇಶವಿಲ್ಲದೆ; 'ಲೋಕವತ್ತು ಲೀಲಾ ಕೈವಲ್ಯಂ' ಎಂಬ ಶಾಸ್ತ್ರ ವಚನದ ಛಾಯೆ ಇಲ್ಲಿ ಕಾಣುತ್ತದೆ.

**ಕದ ಬಾಗಿಲಿರಿಸಿಹ** – ಒಂಬತ್ತು ಬಾಗಿಲುಗಳಿರುವ ಈ ದೇಹವನ್ನೇ ಇಲ್ಲಿ ಮನೆಯೆಂದು ಕರೆದಿದ್ದಾರೆ ('ನವದ್ವಾರೇ ಪುರೇ ದೇಹೀ'). ಆದರೆ ಇದು 'ಕಳ್ಳ ಮನೆ,' ಮನೆಯೆಂದು ತೋರಿದರೂ ಅಲ್ಲಿ ನೆಮ್ಮದಿಯಿಲ್ಲ, ಸ್ಥಿರವಾಗಿ ಅಲ್ಲಿಯೇ ಜೀವ ಇರುವ ಭರವಸೆಯಿಲ್ಲ.

**ಮುದದಿಂದಲೋಲ್ಯಾಡೊ** – ವಿಷಯ ಸುಖಗಳೇ ಸುಖಗಳು ಎಂದು ನಂಬಿ ಪ್ರಾಪಂಚಿಕ ಭೋಗದಲ್ಲೇ ತೊಡಗಿಸುವ ಮನೆ; 'ಸುಳ್ಳು ಮನೆ'ಯೆಂದರೆ ಮಾಯೆಯ ಜಾಲ.

**ಇದಿರಾಗಿ...** – ಆದರೆ ದೇಹದ ದಹರಾಕಾಶದಲ್ಲಿ ಪರಮಾತ್ಮನ ಸಾನ್ನಧ್ಯವನ್ನೂ ಹೊಂದಿರುವ ಮನೆ; ಬಿಂಬ–ಪ್ರತಿಬಿಂಬರಾದ ಈಶ್ವರ–ಜೀವರು ಒಂದೆಡೆ ಕೂಡಿರುವುದೇ 'ದಿವ್ಯ ಬದುಕು'.

**Classification:** Keerthane
**Ankita:** sri purandara vittala
**Location:** NA
**Category:** Jeevana Darshana
**Group Words:** harikatha, yama, vaikunta, bagilu, kalla, sullu, padma, patni, nara,
**Pravachana:** NA
**Explanation:** NA